**ದಿನಾಂಕ: 16-01-2021 ರಂದು ವಾರ್ಡ್ ಸಂಖ್ಯೆ 197 ವಸಂತಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

***ಹಾಜರಿದ್ದ ಸಮಿತಿ ಸದಸ್ಯರು:-***

1. ಶ್ರೀ ಮಹದೇಶ್.ಹೆಚ್.ಎಸ್- ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ಬೊಮ್ಮನಹಳ್ಳಿ ವಲಯ
2. ಶ್ರೀ ಜಗದೀಶ್ ರಾವ್ ವಾಡೆ-ನಾರಾಯಣನಗರ 3ನೇ ಬ್ಲಾಕ್ RWA
3. ಶ್ರೀ ಎನ್.ಆರ್.ಸೋಮಶೇಖರ್ -ನಾರಾಯಣನಗರ 3ನೇ ಬ್ಲಾಕ್ RWA
4. ಶ್ರೀ ಎನ್.ವೆಂಕಟೇಶ್-ಮುನಿರೆಡ್ಡಿ ಬಡಾವಣೆ RWA
5. ಶ್ರೀ ಸತ್ಯಕುಮಾರ್- ಮುನಿರೆಡ್ಡಿ ಬಡಾವಣೆ RWA
6. ಶ್ರೀ ಡಿ.ಎನ್.ಶೇಖರ್ ರೆಡ್ಡಿ-ಮುನಿರೆಡ್ಡಿ ಬಡಾವಣೆ RWA
7. ಶ್ರೀ ಬಿ.ಎಸ್.ರಾಜೇಶ್- ಸಿಂಗಾಪುರ ಗಾರ್ಡ್‌ನ್-2 ಬಡಾವಣೆ RWA
8. ಶ್ರೀ ಎಂ.ಎನ್.ಗೋಪಾಲಕೃಷ್ಣ- ಸಿಂಗಾಪುರ ಗಾರ್ಡ್‌ನ್-2 ಬಡಾವಣೆ RWA
9. ಶ್ರೀ ಗುರುಶರಣ್ - ಸಿಂಗಾಪುರ ಗಾರ್ಡ್‌ನ್ ಬಡಾವಣೆ RWA
10. ಶ್ರೀ ಎಂ.ನಾರಾಯಣಪ್ಪ- ವಿಠ್ಠಲನಗರ ಬಡಾವಣೆ RWA
11. ಡಾ// ಶ್ರೀನಿವಾಸ್ ಮೂರ್ತಿ- ವಿಠ್ಠಲನಗರ ಬಡಾವಣೆ RWA
12. ಶ್ರೀ ಬಿ.ವಿ.ಶ್ರೀನಿವಾಸ್ ರಾವ್-ಸಾರ್ವಭೌಮನಗರ ಬಡಾವಣೆ RWA

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ನರೇಂದ್ರ ಕುಮಾರ್.ಎ - ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 197 ವಸಂತಪುರ)
2. ಶ್ರೀ ಮಹೇಶ್ - ಕಿರಿಯ ಆರೋಗ್ಯ ಪರಿವೀಕ್ಷಕರು (ವಾರ್ಡ್ 197 ವಸಂತಪುರ)
3. ಶ್ರೀಮತಿ ಪ್ರೀತಿ.ಜೆ - ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
4. ಶ್ರೀ ವಿನಯ್ ಕುಮಾರ್ - ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ
5. ಶ್ರೀ ಟಿ.ತಮ್ಮಣ್ಣ-ಸಹಾಯಕ ಅಭಿಯಂತರರು, ಬೃಹತ್ ಮಳೆ ನೀರು ಗಾಲುವೆ, ಬೊಮ್ಮನಹಳ್ಳಿ
6. ಶ್ರೀ ಕಿರಣ್.ಬಿ.ಎನ್-ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ
7. ಡಾ// ಪಲ್ಲವಿ - ಮೆಡಿಕಲ್ ಆಫೀಸರ್, ವಸಂತಪುರ ಪಿ.ಹೆಚ್.ಸಿ
8. ಶ್ರೀ ಬಿ.ಜೆ.ಶ್ರೀನಿವಾಸ್-ಎ.ಎಸ್.ಐ ಸಂಚಾರಿ ಪೋಲೀಸ್ ಠಾಣೆ, ಕುಮಾರಸ್ವಾಮಿ ಬಡಾವಣೆ
9. ಶ್ರೀ ಲೋಕೇಶ್.ಕೆ-ಹೆಡ್ ಕಾನ್ಸ್‌ಟೇಬಲ್, ಕುಮಾರಸ್ವಾಮಿ ಬಡಾವಣೆ
10. ಶ್ರೀ ನವೀನ್ ಕುಮಾರ್.ಕೆ -ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ಕಾರ್ಯಪಾಲಕ ಅಭಿಯಂತರರು ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

Scanned with CamScanner

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ನಾರಾಯಣನಗರ 1ನೇ ಬ್ಲಾಕ್‌ನಲ್ಲಿ ಮ್ಯಾನ್‌ಹೋಲ್ ಕವರ್‌ಗಳನ್ನು ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ.
- ಮ್ಯಾನ್‌ಹೋಲ್‌ನಿಂದ ಸ್ಯಾನಿಟರಿ ನೀರು ಕನಕಪುರ ಮುಖ್ಯರಸ್ತೆ ಎ2ಬಿ ಹೋಟೆಲ್ ಮುಂಭಾಗದಲ್ಲಿ ಹಾಗೂ ದೊಡ್ಡಕಲ್ಲಸಂದ್ರ ಮುಖ್ಯರಸ್ತೆಯ ನಮ್ಮೂರ ಹೋಟೇಲ್‌ನಿಂದ ಕುಮಾರನ್ಸ್ ಶಾಲೆ ರಸ್ತೆಯವರೆಗೆ ಹೊರ ಹರಿಯುತ್ತಿದ್ದು, ಇದನ್ನು ತಡೆಗಟ್ಟಲು ಕೋರಿರುತ್ತಾರೆ.
- ವಿಠ್ಠಲನಗರದಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಸಬ್ ಲೈನ್ ಅಳವಡಿಸಲು ಅಗೆದಿದ್ದ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಬೇಕಾಗಿ ಕೋರಿರುತ್ತಾರೆ.
- ದೊಡ್ಡಕಲ್ಲಸಂದ್ರ ರಸ್ತೆಯ ನಮ್ಮೂರ ಹೋಟೇಲ್ ಮುಂಭಾಗದಲ್ಲಿನ ಚೇಂಬರ್‌ಗಳನ್ನು ರಸ್ತೆಯ ಮಟ್ಟಕ್ಕೆ ಎತ್ತರಿಸಬೇಕಾಗಿ ಕೋರಿರುತ್ತಾರೆ.
- ಮುನಿರೆಡ್ಡಿ ಬಡಾವಣೆಯ ಸಾರ್ವಜನಿಕರು 1 ವರ್ಷ 3 ತಿಂಗಳ ಹಿಂದೆಯೇ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಪ್ರೋರೋಟಾ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಿದ್ದರೂ ಇದುವರೆಗೂ ಕುಡಿಯುವ ನೀರನ್ನು ಬಡಾವಣೆಗೆ ಸರಬರಾಜು ಮಾಡಿರುವುದಿಲ್ಲವೆಂದು ದೂರಿರುತ್ತಾರೆ.
- ನಾರಾಯಣನಗರ 3ನೇ ಹಂತದ 5ನೇ ಮುಖ್ಯರಸ್ತೆಯಿಂದ 100 ಅಡಿ ರಸ್ತೆಯವರೆಗೆ 450 ಸೆ.ಮೀ ಗಾತ್ರದ ಒಳಚರಂಡಿ ಪೈಪುಗಳನ್ನು ಅಳವಡಿಸಲು
- ಸಾರ್ವಭೌಮನಗರ 3ನೇ ಮುಖ್ಯರಸ್ತೆಯಲ್ಲಿನ ಚೇಂಬರ್‌ಗಳನ್ನು ದುರಸ್ಥಿಗೊಳಿಸುವುದರೊಂದಿಗೆ ರಸ್ತೆಯ ಮಟ್ಟಕ್ಕೆ ಎತ್ತರಿಸಬೇಕಾಗಿ ಕೋರಿರುತ್ತಾರೆ.

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಕೋವಿಡ್-19 ಗೆ ಸಂಬಂಧಪಟ್ಟಂತೆ**

ಕೋವಿಡ್-19 ರ ಬಗ್ಗೆ ಡಾ// ಪಲ್ಲವಿ ರವರು ಮಾತನಾಡುತ್ತಾ,

- 18-01-2021 ರಿಂದ ವ್ಯಾಕ್ಸಿನೇಷನ್ ಕಾರ್ಯಕ್ರಮಗಳು ಚಾಲನೆಗೊಳ್ಳುತ್ತಿದ್ದು, ಪ್ರಥಮ ಹಂತದಲ್ಲಿ ಎಲ್ಲಾ ಆರೋಗ್ಯ ಕಾರ್ಯಕರ್ತರಿಗೆ ವ್ಯಾಕ್ಸಿನೇಷನ್ ಮಾಡಲಾಗುವುದು ತದನಂತರ ಇತರೆ ಕೊರೋನಾ ವಾರಿಯರ್ಸ್ ರವರುಗಳಿಗೆ ವ್ಯಾಕ್ಸಿನೇಷನ್ ನೀಡಲಾಗುವುದು ಎಂದು ತಿಳಿಸಿರುತ್ತಾರೆ.
- ತದನಂತರ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಈ ಸಂದರ್ಭದಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ವ್ಯಾಕ್ಸಿನೇಷನ್ ಸೆಂಟರ್‌ಗಳನ್ನು ತೆರೆಯಬೇಕಾಗಿದ್ದು, ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡಗಳಲ್ಲಿ ವ್ಯಾಕ್ಸಿನೇಷನ್ ಮಾಡಲು ಅವಕಾಶ ನೀಡಬೇಕಾಗಿ ಕೋರಿರುತ್ತಾರೆ.

3. **ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ**

- ನಾರಾಯಣನಗರ 1ನೇ ಮತ್ತು 3ನೇ ಹಂತದಲ್ಲಿ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿದ್ದು, ಇದನ್ನು ತೆರವುಗೊಳಿಸಲು ಕೋರಿರುತ್ತಾರೆ.
- ನಾರಾಯಣನಗರ 3ನೇ ಹಂತದ 100 ಅಡಿ ರಸ್ತೆ ಜಂಕ್ಷನ್‌ನಲ್ಲಿನ ಪೆಟ್ಟಿ ಅಂಗಡಿಯನ್ನು ತೆರವುಗೊಳಿಸಲು ಕೋರಿರುತ್ತಾರೆ.
- ವಿಠ್ಠಲನಗರದಲ್ಲಿನ ಪಾದಚಾರಿ ಮಾರ್ಗದಲ್ಲಿ ಹುಲ್ಲುಗಳು ಬೆಳೆಯದಂತೆ ನಿರ್ವಹಣೆ ಮಾಡಬೇಕಾಗಿ ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ಘನತ್ಯಾಜ್ಯವನ್ನು ಮನೆಗಳಿಂದ ಪ್ರತಿದಿನ ನಿಯಮಿತವಾಗಿ ಸಂಗ್ರಹಿಸಲಾಗುತ್ತಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹಾಗೂ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

Scanned with CamScanner

4. **<u>ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.</u>**

- ಮಾರುತಿ ಬಡಾವಣೆ ಹಾಗೂ ನಾರಾಯಣನಗರ 3ನೇ ಹಂತದಲ್ಲಿ ಬೆಸ್ಕಾಂ ಇಲಾಖೆಯಿಂದ ಕೇಬಲ್ ಅಳವಡಿಸಲು ಅಗೆದಿರುವ ರಸ್ತೆಗಳನ್ನು ಮರು ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ನಾರಾಯಣನಗರ 3ನೇ ಹಂತದ 100 ಅಡಿ ರಸ್ತೆಯಲ್ಲಿ ಬೆಸ್ಕಾಂ ಇಲಾಖೆಯ ಕೇಬಲ್ ಅಳವಡಿಸಲು ರಸ್ತೆ ಅಂಚಿನಲ್ಲಿನ ಕರ್ಬ್‌ಗಳು ಕದಡಿದ್ದು, ಇವುಗಳನ್ನು ಮರುಜೋಡಣೆ ಮಾಡಲು ಕೋರಿರುತ್ತಾರೆ.
- ಮುನಿರೆಡ್ಡಿ ಬಡಾವಣೆಯಲ್ಲಿ ಓಬರ್ ಹೆಡ್ ಕೇಬಲ್‌ಗಳನ್ನು ಭೂಅಂತರ್ಗತ ಕೇಬಲ್‌ಗಳಾಗಿ ಉನ್ನತೀಕರಣಗೊಳಿಸಲು ಕೋರಿರುತ್ತಾರೆ.
- ಕನಕಪುರ ಮುಖ್ಯರಸ್ತೆ ಮತ್ತು ಗುಬ್ಬಲಾಳ ರಸ್ತೆಯ ಜಂಕ್ಷನ್ ಬಳಿಯಲ್ಲಿನ ಟ್ರಾನ್ಸ್‌ಫರ್‌ಗೆ ಬೇಲಿ ನಿರ್ಮಿಸಬೇಕಾಗಿ ಕೋರಿರುತ್ತಾರೆ.
- ವಿಠ್ಠಲನಗರ ಬಡಾವಣೆಯ 3ನೇ ಮುಖ್ಯರಸ್ತೆ ಶಂಕರಪ್ಪ ರವರ ಮನೆಯ ಹತ್ತಿರದ ಟ್ರಾನ್ಸ್‌ಫರ್‌ನಲ್ಲಿ ಆಗಾಗ ಬೆಂಕಿ ಕಾಣಿಸುತ್ತಿದ್ದು, ಇದನ್ನು ತುರ್ತಾಗಿ ದುರಸ್ಥಿಗೊಳಿಸಬೇಕಾಗಿ ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

5. **<u>ಬೃಹತ್ ಮಳೆ ನೀರುಗಾಲುವೆ ಇಲಾಖೆಗೆ ಸಂಬಂಧಪಟ್ಟಂತೆ.</u>**

- ವಿಠ್ಠಲನಗರ ಬಡಾವಣೆಗೆ ಹೊಂದಿಕೊಂಡಂತೆ ಚಿಕ್ಕದೇವರಕೆರೆಯಿಂದ ಹಾಗೂ ಕುಮಾರಸ್ವಾಮಿ ಬಡಾವಣೆ ಕಡೆಯಿಂದ ದೊರೆಕೆರೆಗೆ ಬರುವ ಬೃಹತ್ ನೀರುಗಾಲುವೆಗಳಲ್ಲಿನ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಸಾರ್ವಭೌಮನಗರ 3ನೇ ಮುಖ್ಯರಸ್ತೆಯಿಂದ ರಾಮಾಂಜನೇಯನಗರ ಸಂಪರ್ಕಿಸುವ ರಾಜಕಾಲುವೆಯಲ್ಲಿನ ಹೂಳನ್ನು ತೆರವುಗೊಳಿಸಿ ಸದರಿ ಕಾಲುವೆ ಮೇಲ್ಭಾಗಕ್ಕೆ ಮೇಲ್ಹಾವಣಿಯನ್ನು ಅಳವಡಿಸಲು ಕೋರಿರುತ್ತಾರೆ.
- ದೊಡ್ಡಕಲ್ಲಸಂದ್ರ ಮುಖ್ಯರಸ್ತೆ ಮತ್ತು ಕುಮಾರನ್ಸ್ ಸ್ಕೂಲ್ ರಸ್ತೆ ಜಂಕ್ಷನ್‌ನಲ್ಲಿ ದೊಡ್ಡಕಲ್ಲಸಂದ್ರ ಗ್ರಾಮದಿಂದ ಬರುವ ನೀರುಗಾಲುವೆಯನ್ನು ಕುಮಾರನ್ಸ್ ಸ್ಕೂಲ್ ರಸ್ತೆಯಲ್ಲಿನ ನೀರುಗಾಲುವೆಗೆ ಜೋಡಣೆ ಮಾಡಲು ಕಲ್‌ವರ್ಟ್ ನಿರ್ಮಾಣ ಮಾಡಲು ಕೋರಿರುತ್ತಾರೆ.
- ದೊಡ್ಡಕಲ್ಲಸಂದ್ರದ ಪ್ರೆಸ್ಟಿಜ್ ಫಾಲ್ಕನ್ ಸಿಟಿ ವಸತಿ ಸಮುಚ್ಚಯದಲ್ಲಿ ಉತ್ಪತ್ತಿಯಾಗುವ ಸ್ಯಾನಿಟರಿ ನೀರನ್ನು ದೊಡ್ಡಕಲ್ಲಸಂದ್ರ ಬೃಹತ್ ಮಳೆ ನೀರು ಗಾಲುವೆಗೆ ಬಿಡುತ್ತಿರುತ್ತಾರೆ ಎಂದು ಅಲ್ಲಿನ ಸಾರ್ವಜನಿಕರು ದೂರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರು ಗಾಲುವೆ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

6. **<u>ಸಂಚಾರಿ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ</u>**

- ಗುಬ್ಬಲಾಳ ಮುಖ್ಯರಸ್ತೆಯಲ್ಲಿ ನೋ-ಪಾರ್ಕಿಂಗ್ ಫಲಕಗಳನ್ನು ಅಳವಡಿಸಲು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆ ಮತ್ತು ನಾರಾಯಣನಗರ ಆರ್ಯ ವಸತಿ ಸಮುಚ್ಚಯದ ಬಳಿ ಹಾಗೂ 100 ಅಡಿ ರಸ್ತೆ ದೊಡ್ಡಕಲ್ಲಸಂದ್ರ ಕೆರೆ ಬಳಿ ಬಹಳ ವರ್ಷಗಳಿಂದ ಹಳೆಯ ವಾಹನಗಳನ್ನು ರಸ್ತೆಯಲ್ಲಿ ನಿಲುಗಡೆ ಮಾಡಿದ್ದು, ಇವುಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಗೋಕುಲಂ ಅಪಾರ್ಟ್‌ಮೆಂಟ್ ರಸ್ತೆಯಿಂದ ಗುಬ್ಬಲಾಳ ಜಂಕ್ಷನ್ ಕಡೆಗೆ ರಾಂಗ್ ಸೈಡ್‌ನಲ್ಲಿ ವಾಹನಗಳು ಓಡಾಡುತ್ತಿದ್ದು, ಇದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.
- ಕನಕಪುರ ಮುಖ್ಯರಸ್ತೆ ಹಾಗೂ ಗುಬ್ಬಲಾಳ ರಸ್ತೆ ಜಂಕ್ಷನ್‌ನಲ್ಲಿ ಪಾದಚಾರಿಗಳು ರಸ್ತೆಯನ್ನು ದಾಟಲು ಅನುವು ಮಾಡಿಕೊಡುವಂತೆ ಹೆಚ್.ಆರ್.ಪಿ.ಸಿ ಗಳನ್ನು ನಿರ್ಮಿಸಲು ಹಾಗೂ ಅಗತ್ಯ ಜೀಬ್ರಾ ಕ್ರಾಸಿಂಗ್ ಅಳವಡಿಸಲು ಕೋರಿರುತ್ತಾರೆ.
- ಕನಕಪುರ ಮುಖ್ಯರಸ್ತೆಯಿಂದ ಸೌಧಾಮಿನಿ ಬಡಾವಣೆ ಕಡೆಗೆ ಹೋಗುವ ವಾಹನಗಳನ್ನು ಕೋಣನಕುಂಟೆ ಕ್ರಾಸ್‌ನಿಂದ ಹೋಗುವ ಬದಲಾಗಿ ಕನಕಪುರ ಮುಖ್ಯರಸ್ತೆ ಎ2ಬಿ ಹೋಟೇಲ್ ಮುಂಭಾಗದಿಂದ-ಡಬಲ್ ರೋಡ್-ನಾರಾಯಣನಗರ 100 ಅಡಿ ರಸ್ತೆ-ಪಿ.ಎಸ್.ಬಿ ಬಡಾವಣೆ ಮುಖ್ಯರಸ್ತೆಯಿಂದ ಸೌದಾಮಿನಿ ಬಡಾವಣೆಗೆ ಹೋಗುವಂತೆ ಅಗತ್ಯ ಸೂಚನೆಗಳನ್ನು ಅಳವಡಿಸಲು ಕೋರಿರುತ್ತಾರೆ. ಈ ತರಹ ರಸ್ತೆ ಮಾರ್ಗ ಬದಲಾವಣೆ

Scanned with CamScanner

ಮಾಡಿದ್ದಲ್ಲಿ ಕೋಣನಕುಂಟೆ ಜಂಕ್ಷನ್‌ನಲ್ಲಿ ವಾಹನ ದಟ್ಟನೆಯನ್ನು ಕಡಿಮೆಗೊಳಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

- ದೊಡ್ಡಕಲ್ಲಸಂದ್ರ ಮುಖ್ಯರಸ್ತೆಯ ನಮ್ಮೂರ ಉಪಹಾರ ಹೋಟೆಲ್ ಬಳಿ ಸಾರ್ವಜನಿಕರು ವಾಹನಗಳನ್ನು ಸಾಲಾಗಿ ನಿಲ್ಲಿಸದೇ ಇರುವುದರಿಂದ ರಸ್ತೆಯಲ್ಲಿ ವಾಹನಗಳು ಸಂಚರಿಸಲು ಬಹಳ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.
- ದೊಡ್ಡಕಲ್ಲಸಂದ್ರದಲ್ಲಿನ ಕುಮಾರನ್ಸ್ ಶಾಲೆಯ ಬಸ್ಸುಗಳು ದೊಡ್ಡಕಲ್ಲಸಂದ್ರ ಮುಖ್ಯರಸ್ತೆ ಮಾರ್ಗವಾಗಿ ಸದರಿ ಶಾಲೆಯನ್ನು ತಲುಪುವ ಬದಲಾಗಿ ನಾರಾಯಣನಗರ 100 ಅಡಿ ರಸ್ತೆ ಮಾರ್ಗವಾಗಿ ಶಾಲೆಯನ್ನು ತಲುಪಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನವನ್ನು ನೀಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಚಾರಿ ಪೋಲೀಸ್ ಠಾಣಾಧಿಕಾರಿಗಳು ಕುಮಾರಸ್ವಾಮಿ ಬಡಾವಣೆ ಸಂಚಾರಿ ಪೋಲೀಸ್ ಠಾಣೆ ರವರಿಗೆ ಸೂಚಿಸಿರುತ್ತಾರೆ.

7. <u>ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ</u>

- ದೊಡ್ಡಕಲ್ಲಸಂದ್ರ ಮುನಿರೆಡ್ಡಿ ಬಡಾವಣೆಯಲ್ಲಿ ರಸ್ತೆ ದೀಪಗಳನ್ನು ನಿಯಂತ್ರಿಸಲು ಸ್ವಿಚ್‌ಗಳನ್ನು ಅಳವಡಿಸಲು ಕೋರಲಾಗಿ ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.
- ಕನಕಪುರ ಮುಖ್ಯರಸ್ತೆ ಗುಬ್ಬಲಾಳ ಜಂಕ್ಷನ್‌ನಲ್ಲಿ ಹಾಗೂ ರಾಮಾಂಜನೇಯನಗರ 3ನೇ ಮುಖ್ಯರಸ್ತೆಯಲ್ಲಿನ ಪಾದಚಾರಿ ಮಾರ್ಗವನ್ನು ರಸ್ತೆ ಬೀದಿ ವ್ಯಾಪಾರಿಗಳು ಆವರಿಸಿಕೊಂಡಿದ್ದು, ಇವರುಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರಲಾಗಿ ಈ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಪರಿವೀಕ್ಷಕರು ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಕೆರೆಯ ಅಭಿವೃದ್ಧಿ ಕೈಗೊಳ್ಳುತ್ತಿದ್ದು, ಸದರಿ ಕೆರೆಗೆ ಸೌದಾಮಿನಿ ಬಡಾವಣೆ ಮತ್ತು ಮೇಲ್ಭಾಗದ ಬಡಾವಣೆಗಳಿಂದ ಬರುವ ಕಲುಷಿತ ನೀರು ಕೆರೆಯ ಒಳಗಡೆ ಹೋಗದಂತೆ ರಾಜಕಾಲುವೆಯನ್ನು ನಿರ್ಮಿಸಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರು ಗಾಲುವೆ ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
- ಕೆ.ಎಸ್.ಆರ್.ಟಿ.ಸಿ ಚಿಕ್ಕಲಸಂದ್ರ ಬಡಾವಣೆಯಲ್ಲಿನ ಆಟದ ಮೈದಾನಕ್ಕೆ ಹೊಂದಿಕೊಂಡಂತೆ ನಿರ್ಮಿಸಿರುವ ಕಟ್ಟಡದಲ್ಲಿ ಬೆಂಗಳೂರು ಒನ್ ಕೇಂದ್ರವನ್ನು ತೆರೆಯಲು ಕೋರಿರುತ್ತಾರೆ. ಹಾಗೂ ಮತ್ತೊಂದು ಕಟ್ಟಡವು ಅನುಪಯುಕ್ತವಾಗಿದ್ದು, ಇದರಿಂದ ಸದರಿ ಕಟ್ಟಡದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಮಾನ್ಯ ನೋಡಲ್ ಅಧಿಕಾರಿಗಳು ಸದರಿ ಕಟ್ಟಡದಲ್ಲಿ ಪಾಲಿಕೆಯ ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಹಾಗೂ ಸಮವಸ್ತ್ರ ಬದಲಾಯಿಸುವ ಕೊಠಡಿಯಾಗಿ ನಿರ್ವಹಿಸಲು ಆರೋಗ್ಯ ಪರಿವೀಕ್ಷಕರಿಗೆ ಸ್ವಾಧೀನಕ್ಕೆ ಪಡೆಯಲು ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಮಹದೇಶ್.ಹೆಚ್.ಎಸ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಮಹದೇಶ್.ಹೆಚ್.ಎಸ್
ಅಧ್ಯಕ್ಷರು ಹಾಗೂ ಕಾರ್ಯಪಾಲಕ ಅಭಿಯಂತರರು
ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
ಬೊಮ್ಮನಹಳ್ಳಿ ವಲಯ

ಶ್ರೀ ನರೇಂದ್ರ ಕುಮಾರ್.ಎ
ಸಂಚಾಲಕರು ಹಾಗೂ ಸ.ಅ-197

**ಪ್ರತಿಯನ್ನು:-**

1. ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು ಬೆಂಗಳೂರು-ದಕ್ಷಿಣ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner